**ಪಿ.ಡಬ್ಲ್ಯೂ-1**

ದಿನಾಂಕಃ **06-02-2024** ರಂದು ಸಾಕ್ಷಿದಾರರನ್ನು ಕರೆಸಿ ಪ್ರಮಾಣ ವಚನ ಭೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲು ಶ್ರೀ ಎ.ಜಿ.ಡಿ. ವಕೀಲರಿಂದಃ-

ರಾಮಾನಾಯ್ಕನ ಮಕ್ಕಳಾದ ಪ್ರತಿವಾದಿ 1 ಹಾಗೂ 2 ತಮ್ಮ ತಮ್ಮ ಆಸ್ತಿಗಳನ್ನು ಹಿಸ್ಸೆ ಮಾಡಿಕೊಂಡಿದ್ದಾರೆ ಎನ್ನುವುದು ಸರಿಯಲ್ಲ. ಅವರುಗಳು ಹಿಸ್ಸೆ ಮಾಡಿಕೊಂಡು ಆಸ್ತಿಗಳನ್ನು ಮಾರಾಟ ಮಾಡಿದ್ದಾರೆ ಎನ್ನುವ ವಿಷಯ ನನಗೆ ಗೊತ್ತಿಲ್ಲ. ನನ್ನ ವಾದ ಪತ್ರದಲ್ಲಿ ಪ್ರತಿವಾದಿಗಳು ಆಸ್ತಿ ಮಾರಿರುವ ಬಗ್ಗೆ ನಾನು ಬರೆದಿದ್ದೇನೆ ಏಕೆಂದರೆ ದಾವೆ ಹಾಕುವಾಗ ಅದು ನನಗೆ ಗೊತ್ತಾಯಿತು. ದೇವರಾಜನಾಯ್ಕನು ಮೂರ್ತಿನಾಯ್ಕನಿಗೆ ಆಸ್ತಿ ಮಾರಿದ್ದಾನೆ ಎನ್ನುವುದು ನಿಜ. ನಾನು ಮೂರ್ತಿನಾಯ್ಕನ ಮೇಲೆ ಕೇಸನ್ನು ಹಾಕಿಲ್ಲ. ಯಾವ ಸರ್ವೆ ನಂಬರ್ ನಲ್ಲಿ ಎಷ್ಟು ಜಮೀನನ್ನು ಮೂರ್ತಿನಾಯ್ಕನಿಗೆ ಮಾರಿದ್ದಾರೆ ಎಂದು ನನಗೆ ಗೊತ್ತಿಲ್ಲ. ದಾವಾ 6 ರಿಂದ 12 ನೇ ಆಸ್ತಿಗಳು ಮಾತ್ರ ಪ್ರತಿವಾದಿ1 ಹಾಗೂ 2 ಇವರ ಸ್ವಾಧೀನದಲ್ಲಿದೆ ಎನ್ನುವ ಪ್ರಶ್ನೆಗೆ ಸಾಕ್ಷಿ ಎಲ್ಲರೂ ಎಲ್ಲಾ ಆಸ್ತಿಗಳಲ್ಲಿ ಸ್ವಾಧೀನದಲ್ಲಿದ್ದಾರೆ ಎಂದು ಹೇಳುತ್ತಾರೆ. ದಾವಾ 1 ರಿಂದ 5 ನೇ ಆಸ್ತಿಯು ಖರೀದಿದಾರರ ಸ್ವಾಧೀನದಲ್ಲಿದೆ ಎನ್ನುವುದು ಸರಿಯಲ್ಲ. ನಾನು ರಾಜಾನಾಯ್ಕನ ಮಗಳು ದೇವಿಬಾಯಿಯ ಮಗಳಲ್ಲ ಎನ್ನುವುದು ಸುಳ್ಳು. ನಾನು ದೇವಿಬಾಯಿಯ ಮಗಳಾಗಿರುತ್ತೇನೆ ಹಾಗೂ ರಾಜಾನಾಯ್ಕನ ಸಾಕು ಮಗಳಾಗಿರುತ್ತೇನೆ. ನಾನು ಯೋಗೀಶನೊಡನೆ ಮದುವೆ ಮಾಡಿಕೊಂಡು ಆತನೊಡನೆ ವಾಸವಿದ್ದೇನೆ ಎನ್ನುವುದು ನಿಜ. ಯೋಗೀಶನ ಪೂರ್ವದಲ್ಲಿ ನಾನು ಬೇರೊಬ್ಬನನ್ನು ಮದುವೆ ಮಾಡಿಕೊಂಡಿದ್ದೆ ಎನ್ನುವುದು ನಿಜ. ನನಗೆ ಯೋಗೀಶ 3 ನೇ ಗಂಡ ಎನ್ನುವುದು ಸುಳ್ಳು. ದಾವಾ ಆಸ್ತಿಗೂ ನನಗೂ ಸಂಬಂಧ ಇಲ್ಲ ಎನ್ನುವುದು ಸರಿಯಲ್ಲ. ನಾನು ದಾವಾ ಆಸ್ತಿಯನ್ನು ಲಪಟಾಯಿಸುವ ಉದ್ದೇಶದಿಂದ ಸುಳ್ಳು ಕೇಸನ್ನು ಹಾಕಿದ್ದೇನೆ ಎನ್ನುವುದು ಸರಿಯಲ್ಲ. 30 ವರ್ಷದಿಂದ ಈ ಕೇಸನ್ನು ಏಕೆ ಹಾಕಲಿಲ್ಲ ಎನ್ನುವ ಪ್ರಶ್ನೆಗೆ ಸಾಕ್ಷಿಯು ನನ್ನ ತಾಯಿ 2021 ರವರೆಗೆ ಬದುಕಿದ್ದರು ಆ ನಂತರ ನನಗೆ ನಾನು ತಾಯಿಯ ಆಸ್ತಿಯಲ್ಲಿ ಹಿಸ್ಸೆ

ಪಡೆದುಕೊಳ್ಳಬಹುದು ಎಂದು ಗೊತ್ತಾಯಿತು ಆಗ ನಾನು ಈ ಕೇಸನ್ನು ಹಾಕಿದೆ. ಪ್ರತಿವಾದಿ 1 ಮತ್ತು 2 ರವರಿಗೆ ರತ್ನಾ ಬಾಯಿ ತಂಗಿ ಅಲ್ಲ ಎನ್ನುವುದು ಸರಿ. ನಾನು ರಾಜಾನಾಯ್ಕ ಹಾಗೂ ರತ್ನಾಬಾಯಿಯ ಮಗಳಾಗಿರುತ್ತೇನೆ ಎನ್ನುವುದು ಸರಿಯಲ್ಲ. ನಾನು ದಾವಾ ಆಸ್ತಿಗಳನ್ನು ಲಪಟಾಯಿಸುವ ಉದ್ದೇಶದಿಂದ ನಾನು ದೇವರಾಜನಾಯ್ಕನ ಅಕ್ಕ ದೇವೀಬಾಯಿಯವರ ಮಗಳು ಎಂದು ಸುಳ್ಳು ಕೇಸು ಹಾಕಿದ್ದೇನೆ ಎನ್ನುವುದು ಸರಿಯಲ್ಲ.

ಮರು ವಿಚಾರಣೆಃ ಇಲ್ಲಾ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಸಾಕ್ಷಿದಾರರ ಸಾಕ್ಷ್ಯವನ್ನು ಗಣಕೀಕೃತ ಮಾಡಿಕೊಳ್ಳಲಾಯಿತೆಂದು ಈ ಮೂಲಕ ದೃಢೀಕರಿಸಿರುತ್ತೇನೆ.)

(ಸಾ ಓ ಹೇ ಕೇ ಸ ಇ ಎಂದು ಒಪ್ಪಿರುತ್ತಾರೆ)

**( ಅನಿತ, ಜಿ. )**
ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.
ಅರಸೀಕೆರೆ. **06-02-2024.**